(ಸಾಕ್ಷಿಯನ್ನು ದಿನಾಂಕ: 03.06.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಕೆ.ಆರ್., ಪ್ರತಿವಾದಿಗಳ ಪರ ವಕೀಲರಿಂದಃ**

ನನ್ನ ಮುಂದುವರೆದ ಮುಖ್ಯ ವಿಚಾರಣೆಯಾಗಿ ದಾಖಲೆಗಳನ್ನು ಹಾಜರುಪಡಿಸುತ್ತಿದ್ದು, 2000-01 ರಿಂದ 2010-11 ವರೆಗಿನ 11 ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಗಳನ್ನು ಅನುಕ್ರಮವಾಗಿ ನಿ.ಡಿ.28 ರಿಂದ 38 ಎಂದು, 2015-16 ರಿಂದ 2019-20 ವರೆಗಿನ 5 ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಗಳನ್ನು ಅನುಕ್ರಮವಾಗಿ ನಿ.ಡಿ.39 ರಿಂದ 43 ಎಂದು, ಕ್ರಮ ಸಂಖ್ಯೆ 105 ಸ್ವತ್ತಿನ 2015-16 ರಿಂದ 2019-20 ವರೆಗಿನ 5 ಡಿಮ್ಯಾಂಡ್ ರಿಜಿಸ್ಟರ್ ಎಕ್ಸ್ಟ್ರಾಕ್ಟ್ ಗಳನ್ನು ಅನುಕ್ರಮವಾಗಿ ನಿ.ಡಿ.44 ರಿಂದ 48 ಎಂದು, ಆರು ಫೋಟೋಗಳನ್ನು ಸಿ.ಡಿ.ಯೊಂದಿಗೆ ಹಾಜರುಪಡಿಸಿದ್ದು ಫೋಟೋಗಳನ್ನು ನಿ.ಡಿ.49 ರಿಂದ 54 ಎಂದು ಹಾಗೂ ಸಿ.ಡಿ.ಯನ್ನು ನಿ.ಡಿ.55 ಎಂದು, ಕುಣಿಗಲ್ ಹಿರಿಯ ಸಿವಿಲ್ ನ್ಯಾಯಾಲಯದ ಮೂಲ ದಾವೆ ಸಂಖ್ಯೆ 88/2017 ದಾವೆಯಲ್ಲಿನ ವಾದಪತ್ರ, 1 ರಿಂದ 5 ನೇ ಪ್ರತಿವಾದಿಯರು ಸಲ್ಲಿಸಿದ ಪ್ರತಿವಾದ ಪತ್ರವನ್ನು ಅನುಕ್ರಮವಾಗಿ ನಿ.ಡಿ.56 ಮತ್ತು 57 ಎಂದು, ದಿನಾಂಕಃ 19.02.2015 ರ ನೋಂದಾಯಿತ ಕ್ರಯದ ಕರಾರು ಪತ್ರದ ದೃಢೀಕೃತ ನಕಲನ್ನು ನಿ.ಡಿ.58 ಎಂದು, ಮೇಲೆ ನಮೂದಿಸಿದ ಮೂಲ ದಾವೆ ಸಂಖ್ಯೆ 88/2017 PW-1 and 2 ರವರ ಸಾಕ್ಷ್ಯಗಳ ದೃಢೀಕೃತ ನಕಲುಗಳನ್ನು ಅನುಕ್ರಮವಾಗಿ ನಿ.ಡಿ.59 ಮತ್ತು 60 ಎಂದು ಗುರುತಿಸಲಾಯಿತು.

***ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ವಕೀಲರು ಸಮಯಾವಕಾಶವನ್ನು ಕೋರಿದ್ದು ನೀಡಲಾಯಿತು.***

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಇದೆ

ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,
ಕುಣಿಗಲ್.